

بسم اللهِ الرّحمٰنِ الرّحيم

# ಕೃತಜ್ಞತೆಯ ಕುರಿತು ಹಝ್ರತ್ ಮಸೀಹ್ ಮೌಊದ್(ಅ)ರ ಮಾದರಿ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **28-08-2026** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ)**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ.

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ- بِسْمِ اللّٰهِ الرَّحْمٰنِ الرَّحِيْمِ.

اَلْحَمْدُ لِلّٰهِ رَبِّ الْعَالَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ. اِيَّاكَ نَعْبُدُ وَاِيَّاكَ نَسْتَعِيْنُ.

اِهْدِنَا الصِّرَاطَ الْمُسْتَقِيْمَ. صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಹಝ್ರತ್ ಮುಹಮ್ಮದ್ ಪೈಗಂಬರ್(ಸ)ರ ಧ್ವಜವನ್ನು ಲೋಕದೆಲ್ಲೆಡೆ ಹಾರಿಸಲು ಹಝ್ರತ್ ಮಸೀಹ್ ಮೌಊದ್(ಅ) ಮಾಡಿದ ಪ್ರಯತ್ನಗಳು ಸ್ಪಷ್ಟವಾಗಿ ಕಾಣುವ ಸಂಗತಿಯಾಗಿದೆ. ತಮ್ಮ ಈ ಉದ್ದೇಶವನ್ನು ಪೂರೈಸಲು ಯಾವುದೇ ರೀತಿಯಲ್ಲಿ ಸೇವೆ ಸಲ್ಲಿಸಿದ ತಮ್ಮ ಸಹಾಯಕರ ಬಗ್ಗೆಯೂ ಅವರು ಅತ್ಯಂತ ಕೃತಜ್ಞರಾಗಿದ್ದರು.

4 ಅಕ್ಟೋಬರ್ 1899ರ ಒಂದು ಪ್ರಕಟಣೆಯಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ಹೀಗೆ ಹೇಳಿದರು: ದೇವನ ಪ್ರತಿಯೊಂದು ಸಮುದಾಯಕ್ಕೂ ತಮ್ಮ ಆರಂಭಿಕ ಹಂತದಲ್ಲಿ ಚಂದಾದ ಅವಶ್ಯಕತೆಯಿರುತ್ತದೆ ಎಂಬುದು ದೈವಿಕ ಸಂಪ್ರದಾಯವಾಗಿದೆ. ನಮ್ಮ ನಬಿ(ಸ) ಕೂಡ ಅನೇಕ ಬಾರಿ ಸಹಾಬಿಯರಿಂದ ಚಂದಾಗಳನ್ನು ಆವಶ್ಯಪಟ್ಟಾಗ ಹಝ್ರತ್ ಅಬೂಬಕರ್(ರ) ಎಲ್ಲರಿಗಿಂತ ಮುಂದಿದ್ದರು. ಆದ್ದರಿಂದ ಧೈರ್ಯದಿಂದ ಸಹಾಯ ಮಾಡಲು ತಡಮಾಡದೇ ಮುಂದೆ ಬರಬೇಕು. ಪ್ರತಿಯೊಬ್ಬರೂ ತಮ್ಮ ಸಾಮರ್ಥ್ಯಕ್ಕೆ ಅನುಸಾರ ಈ ಲಂಗರ್‌ಖಾನಾಕ್ಕಾಗಿ ಸಹಾಯ ಮಾಡಬೇಕು. ನಾವು ಲಂಗರ್‌ಖಾನಾದ ಭಾರೀ ಜವಾಬ್ದಾರಿಯಿಂದ ಮುಕ್ತರಾಗಿ ನಮ್ಮ ಕೆಲಸದಲ್ಲಿ ನೆಮ್ಮದಿಯಿಂದ ತೊಡಗಿಕೊಳ್ಳಲಿಕ್ಕಾಗಿ ಮತ್ತು ನಮ್ಮ ಸಮಯ ವ್ಯರ್ಥವಾಗದಿರಲಿಕ್ಕಾಗಿ ಒಂದು ವ್ಯವಸ್ಥೆ ಇರಬೇಕು ಎಂದು ನಾನು ಬಯಸುತ್ತೇನೆ. ಅದಕ್ಕಾಗಿ ನಮ್ಮ ಸಹಾಯಕ್ಕೆ ಬರುವವರು ಕೊನೆಗೆ ದೇವನ ಸಹಾಯವನ್ನು ಪಡೆಯುವರು.

ಈ ಸಹಾಯ ಮತ್ತು ಶ್ರಮದಲ್ಲಿ ಮೊದಲ ಸ್ಥಾನದಲ್ಲಿ ನಮ್ಮ ಪರಿಪೂರ್ಣ ನಿಷ್ಠಾವಂತ ಮೌಲ್ವಿ ಹಕೀಮ್ ನೂರುದ್ದೀನ್ ಸಾಹಿಬ್(ರ) ಇದ್ದಾರೆ ಎಂಬುದನ್ನು ಬರೆಯದೆ ಇರಲು ಸಾಧ್ಯವಿಲ್ಲ. ಅವರು ಕೇವಲ ಆರ್ಥಿಕ ಸಹಾಯ ಮಾಡಿದ್ದಲ್ಲದೆ, ಲೌಕಿಕವಾದ ಎಲ್ಲ ಸಂಬಂಧಗಳನ್ನು ಕಡಿದುಕೊಂಡು, ಫಕೀರರ ಉಡುಪನ್ನು ಧರಿಸಿ, ತಮ್ಮ ತಾಯ್ನಾಡಿನಿಂದ ವಲಸೆ ಬಂದು ಕೊನೆಯ ವರೆಗೂ ಖಾದಿಯಾನಿನಲ್ಲಿ ನೆಲೆಸಿದರು ಮತ್ತು ಸದಾ ಹಾಜರಿರುವರು. ನಾನು ಬಯಸಿದರೆ ಅವರನ್ನು ಪೂರ್ವಕ್ಕೆ ಅಥವಾ ಪಶ್ಚಿಮಕ್ಕೆ ಕಳುಹಿಸಬಲ್ಲೆ. ನನ್ನ ಪ್ರಕಾರ ಇವರೇ ಬರಾಹೀನೆ ಅಹ್ಮದಿಯಾದಲ್ಲಿ **"ಅಸ್‌ಹಾಬುಸ್ಸುಫ್ಫಾ ವಮಾ ಅದ್‌ರಾಕ ಮಾ ಅಸ್‌ಹಾಬುಸ್ಸುಫ್ಫಾ"** ಎಂದು ದಿವ್ಯವಾಣಿಯಲ್ಲಿ ಉಲ್ಲೇಖಿಸಲಾದ ಜನರಾಗಿದ್ದಾರೆ. ಗೌರವಾನ್ವಿತರಾದ ಇವರ ನಂತರ ಎರಡನೇ ಸ್ಥಾನದಲ್ಲಿ ಮೌಲ್ವಿ ಅಬ್ದುಲ್‌ಕರೀಮ್ ಸಾಹಿಬ್ ಸಿಯಾಲ್ಕೋಟಿ ಇದ್ದಾರೆ. ಅವರಿಗೆ ಅಲ್ಲಾಹನು ಮೊದಲೇ ಲೌಕಿಕ ಹುದ್ದೆಗಳು ಮತ್ತು ಸ್ಥಾನಮಾನದ ಆಸೆಯನ್ನು ನೀಡಿರಲಿಲ್ಲ, ಆದರೆ ಈಗಂತೂ ಅವರು ಲೌಕಿಕ ಆಲೋಚನೆಗಳನ್ನು ಸಂಪೂರ್ಣವಾಗಿ ತೊರೆದು ಈ ಬಾಗಿಲಿನಲ್ಲಿ ಕುಳಿತಿದ್ದಾರೆ ಮತ್ತು ಹಗಲು-ರಾತ್ರಿ ತಮ್ಮ ಸಾಮರ್ಥ್ಯಕ್ಕೂ ಮೀರಿ ದೀನಿನ ಸೇವೆ ಮಾಡುತ್ತಿದ್ದಾರೆ; ಜುಮುಅ ನಮಾಝ್‌ನಲ್ಲಿ ಪವಿತ್ರ ಖುರ್‌ಆನಿನ ಅನೇಕ ಸತ್ಯಗಳು ಮತ್ತು ಜ್ಞಾನಗಳನ್ನು ವಿವರಿಸುತ್ತಾರೆ ಹಾಗೂ ಮುಸ್ಲಿಮರಿಗೆ ಪ್ರಯೋಜನವನ್ನು ತಲುಪಿಸುತ್ತಿದ್ದಾರೆ. ಮೌಲ್ವಿ ಹಕೀಮ್ ನೂರುದ್ದೀನ್ ಸಾಹಿಬ್‌ರ ಊರಿನವರಾದ ಹಕೀಮ್ ಫಝ್ಲುಲ್ ದೀನ್ ಸಹ ಇದ್ದಾರೆ, ಅವರು ಕೂಡ ಹೆಚ್ಚಾಗಿ ಇಲ್ಲೇ ವಾಸಿಸುತ್ತಾ ಸೇವೆಗಳಲ್ಲಿ ನಿರತರಾಗಿದ್ದಾರೆ.

ಅನಂತರ ಡಾಕ್ಟರ್ ಬೋಡೆ ಖಾನ್ ಸಾಹಿಬ್, ಖಲೀಫಾ ರಶೀದುದ್ದೀನ್ ಸಾಹಿಬ್ ಲಾಹೋರಿ, ಡಾಕ್ಟರ್ ಮಿರ್ಝಾ ಯಅ್‌ಕೂಬ್ ಬೇಗ್ ಸಾಹಿಬ್ ಕಲಾನೌರಿ, ಡಾಕ್ಟರ್ ಮುಹಮ್ಮದ್ ಇಸ್ಮಾಯಿಲ್ ಸಾಹಿಬ್, ಡಾಕ್ಟರ್ ಅಬ್ದುಲ್ ಹಕೀಮ್ ಖಾನ್ ಸಾಹಿಬ್, ಮಿರ್ಝಾ ಖುದಾ ಬಕ್ಷ್ ಸಾಹಿಬ್, ಸಾಹಿಬ್‌ಝಾದಾ ಸಿರಾಜುಲ್ ಹಕ್ ಸಾಹಿಬ್, ಸೇಠ್ ಅಬ್ದುರ್ರಹ್ಮಾನ್ ಸಾಹಿಬ್‌ರ ಬಗ್ಗೆಯೂ ಹಝ್ರತ್ ಮಸೀಹ್ ಮೌಊದ್(ಅ) ಪ್ರಸ್ತಾಪಿಸಿದರು. 'ಸೇಠ್ ಸಾಹಿಬ್ ತಿಂಗಳಿಗೆ ನೂರು ರೂಪಾಯಿಗಳನ್ನು ತಪ್ಪದೆ ಕಳುಹಿಸುತ್ತಾರೆ ಮತ್ತು ಹಲವು ಬಾರಿ ಐನೂರು ರೂಪಾಯಿಗಳ ವರೆಗೂ ಕಳುಹಿಸಿದ್ದಾರೆ' ಎಂದು ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು. ಅದೇ ರೀತಿ, ಮೊಕದ್ದಮೆಗಳಿಗಾಗಿ ಬಹಳಷ್ಟು ಹಣವನ್ನು ಉಡುಗೊರೆಯಾಗಿ ನೀಡಿದ್ದ ಲಾಹೋರ್‌ನ

ವ್ಯಾಪಾರಿ ಶೇಖ್ ರಹಮತುಲ್ಲಾ ಸಾಹಿಬ್‌ರ ಬಗ್ಗೆ ಪ್ರಸ್ತಾಪಿಸಿದರು. ಅನಂತರ ನವಾಬ್ ಮುಹಮ್ಮದ್ ಅಲಿ ಖಾನ್ ಸಾಹಿಬ್(ರ)ರ ಬಗ್ಗೆಯೂ ಹಝ್ರತ್ ಮಸೀಹ್ ಮೌಊದ್(ಅ) ಪ್ರಸ್ತಾಪಿಸಿದರು.

ಹಝ್ರತ್ ಮಸೀಹ್ ಮೌಊದ್(ಅ) ಸಣ್ಣಪುಟ್ಟ ಸೇವೆ ಮಾಡುವವರಿಗೂ ಕೃತಜ್ಞತೆ ಅರ್ಪಿಸುತ್ತಿದ್ದರು. ಖ್ವಾಜಾ ಕಮಾಲುದ್ದೀನ್ ಸಾಹಿಬ್‌ರ ಬೀದಿಯಲ್ಲಿ ಒಬ್ಬ ವ್ಯಕ್ತಿ ಫಾಲೂದಾ ಮಾರುತ್ತಿದ್ದನು. ಒಮ್ಮೆ ಅವನು ಹಝ್ರತ್ ಮಸೀಹ್ ಮೌಊದ್(ಅ)ರಿಗೆ ಫಾಲೂದಾ ನೀಡುವ ಆಸೆಯನ್ನು ವ್ಯಕ್ತಪಡಿಸಿದನು. ಹಝ್ರತ್ ಮಸೀಹ್ ಮೌಊದ್(ಅ) ಖ್ವಾಜ ಸಾಹಿಬ್‌ರ ಮನೆಗೆ ಹೋದಾಗ ಅವರ ಅನುಮತಿಯೊಂದಿಗೆ ಅವನನ್ನು ಕರೆಸಿದರು. ಅವನು ಫಾಲೂದಾ ತಯಾರಿಸಿ ಹಝ್ರತ್ ಮಸೀಹ್ ಮೌಊದ್(ಅ)ರಿಗೆ ನೀಡಿದನು. ಬಹಳ ಚೆನ್ನಾಗಿದೆ ಎಂದು ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು. ಆಮೇಲೆ ಅವನು ಸ್ನೇಹಿತರಿಗಾಗಿ ಹತ್ತು ಇಪ್ಪತ್ತು ಬಟ್ಟಲುಗಳನ್ನು ಕಳುಹಿಸಿದನು. ಹಝ್ರತ್ ಮಸೀಹ್ ಮೌಊದ್(ಅ) ಅವನಿಗೆ ಎರಡು ರೂಪಾಯಿಗಳನ್ನು ಕಳುಹಿಸಿದರು; ಆದರೆ ಅವನು ಅದನ್ನು ತೆಗೆದುಕೊಳ್ಳಲು ನಿರಾಕರಿಸಿ, ನನಗೆ ಹಣದ ಅವಶ್ಯಕತೆಯಿಲ್ಲ, ನನ್ನನ್ನು ಹಝ್ರತ್ ಮಸೀಹ್ ಮೌಊದ್(ಅ)ರ ಮುಂದೆ ಕರೆದೊಯ್ಯಿರಿ ಎಂದು ಹೇಳಿದನು. ಅದರಂತೆ ಅವನು ಹಝ್ರತ್ ಮಸೀಹ್ ಮೌಊದ್(ಅ)ರ ಬಳಿಗೆ ಹೋದನು. ಹಝ್ರತ್ ಮಸೀಹ್ ಮೌಊದ್(ಅ) ಅವನಿಗಾಗಿ ದುಆ ಮಾಡಿದರು ಮತ್ತು ಜಝಾಕುಮುಲ್ಲಾಹ್ ಎಂದು ಹೇಳಿದರು.

ಹಝ್ರತ್ ಇಬ್ರಾಹೀಂ ಬಕಾಪುರಿ ಸಾಹಿಬ್(ರ) ವಿವರಿಸುತ್ತಾರೆ: ಒಮ್ಮೆ ಸಿಯಾಲ್ಕೋಟ್ ಜಮಾಅತ್‌ನ ಕೆಲವು ಸಹೋದರರು ಸ್ವಲ್ಪ ಹಣವನ್ನು ಉಡುಗೊರೆಯಾಗಿ ನೀಡಿದರು. ಹಝ್ರತ್ ಮಸೀಹ್ ಮೌಊದ್(ಅ) ಮೊದಲು ಅಲ್‌ಹಮ್ದುಲಿಲ್ಲಾಹ್ ಎಂದು ಹೇಳಿದರು, ನಂತರ ಜಝಾಕುಮುಲ್ಲಾಹ್ ಎಂದರು. ಇದರಿಂದ ನಮ್ಮ ಈಮಾನ್ ಮತ್ತಷ್ಟು ಹೆಚ್ಚಾಯಿತು ಏಕೆಂದರೆ ಹಝ್ರತ್ ಮಸೀಹ್ ಮೌಊದ್(ಅ) ಮೊದಲು ಅಲ್ಲಾಹನಿಗೆ ಕೃತಜ್ಞತೆ ಸಲ್ಲಿಸಿದರು, ಅನಂತರ ನಮಗಾಗಿ ದುಆ ಮಾಡಿದರು.

ಝುಲ್ಫಿಕಾರ್ ಅಲಿ ಖಾನ್ ಗೌಹರ್ ಸಾಹಿಬ್ ಒಂದು ಘಟನೆಯನ್ನು ವಿವರಿಸುತ್ತಾರೆ: ಒಮ್ಮೆ ಹಝ್ರತ್ ಮಸೀಹ್ ಮೌಊದ್(ಅ) ಬೈತುದ್ದುಆದ ಕೆಳಗಿನ ಕೊಠಡಿಯಿಂದ ಹೊರಬಂದರು. ನಾನು ಅದರ ಮುಂದಿನ ಕೊಠಡಿಯಲ್ಲಿ ವಾಸಿಸುತ್ತಿದ್ದೆ. ಹಝ್ರತ್ ಮಸೀಹ್ ಮೌಊದ್(ಅ) ಕೂದಲಿಗೆ ಮೆಹಂದಿ ಹಚ್ಚಿಕೊಂಡಿದ್ದರು. ಇಲ್ಲಿಗೆ ನಮಗಾಗಿ ಸ್ವಲ್ಪ ಊಟ ತರಲು ಮೌಲ್ವಿ ಸಯ್ಯದ್ ಸರ್ವರ್ ಶಾಹ್ ಸಾಹಿಬ್‌ರೊಡನೆ ಹೇಳಿ ಎಂದು ನನ್ನೊಡನೆ ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು. ನಾನು ಸಂದೇಶ ತಲುಪಿಸಿದಾಗ ಊಟ ಸಂಪೂರ್ಣವಾಗಿ ಮುಗಿದು ಹೋಗಿದೆ ಎಂದು ತಿಳಿದುಬಂತು. ಹಝ್ರತ್ ಮಸೀಹ್ ಮೌಊದ್(ಅ)ರಿಗಾಗಿ ಊಟ ಉಳಿದಿಲ್ಲ ಎಂಬ ಕಾರಣದಿಂದ ಮೌಲ್ವಿ ಸಾಹಿಬ್‌ರ ಮುಖ ಬಿಳಿಚಿಕೊಂಡಿತು. ಆದರೂ ಅವರು ಒಂದು ಸಣ್ಣ ಬಟ್ಟಲಿನಲ್ಲಿ ಹಾಲು, ಮೂರು ರಸ್ಕ್ ಮತ್ತು ಸಕ್ಕರೆ ತೆಗೆದುಕೊಂಡು ಹಝ್ರತ್ ಮಸೀಹ್ ಮೌಊದ್(ಅ)ರ ಮುಂದೆ ಹಾಜರಾದರು ಮತ್ತು ಇದಲ್ಲದೇ ಬೇರೇನೂ ಇಲ್ಲ ಎಂದು ಹೇಳಿದರು. ಹಝ್ರತ್ ಮಸೀಹ್ ಮೌಊದ್(ಅ) ಅತ್ಯಂತ ಕೃತಜ್ಞತೆಯಿಂದ ಅದನ್ನು ಪಡೆದರು, ಅದು ಅವರ ಮುಖದಲ್ಲಿ ಕಾಣಿಸುತ್ತಿತ್ತು. ಎರಡು ರಸ್ಕ್‌ಗಳನ್ನು ತೆಗೆದು ಸಕ್ಕರೆ ಬೆರೆಸಿ ತಿಂದು ನೀರು ಕುಡಿದರು.

ಆಗಸ್ಟ್ 1900ರಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ಹಝ್ರತ್ ನವಾಬ್ ಮುಹಮ್ಮದ್ ಅಲಿ ಸಾಹಿಬ್(ರ)ರಿಗೆ ಪ್ರಾರ್ಥನೆಯೊಂದಿಗೆ ಕೃತಜ್ಞತೆ ಸಲ್ಲಿಸುತ್ತಾ ಹೀಗೊಂದು ಪತ್ರವನ್ನು ಬರೆದರು: ನೀವು ಅತ್ಯಂತ ಸುಂದರವಾದ ಬಟ್ಟೆಯನ್ನು ಉಡುಗೊರೆಯಾಗಿ ಕಳುಹಿಸಿದ್ದೀರಿ. ಬಟ್ಟೆಯ ಪ್ರತಿಯಾಗಿ ಅಲ್ಲಾಹನು ತನ್ನ ಅಪಾರ ಕೃಪೆ ಹಾಗೂ ಅನುಗ್ರಹವನ್ನು ದಯಪಾಲಿಸಲಿ ಮತ್ತು ತಖ್ವದ ಉಡುಪಿನೊಂದಿಗೆ ಸಂಪೂರ್ಣವಾಗಿ ದೇವಮಿತ್ರರು ಮತ್ತು ಸಜ್ಜನರ ಬಣ್ಣದಿಂದ ಅನುಗ್ರಹೀತಗೊಳಿಸಲಿ.

ಒಂದು ಪತ್ರದಲ್ಲಿ ಹಝ್ರತ್ ಡಾಕ್ಟರ್ ಖಲೀಫಾ ರಶೀದುದ್ದೀನ್ ಸಾಹಿಬ್(ರ)ರಿಗೆ ಹೀಗೆ ಹೇಳಿದರು: ನಿಮ್ಮ ಕಡೆಯಿಂದ ಸಂಕಷ್ಟದ ಸಮಯದಲ್ಲಿ 50 ರೂಪಾಯಿಗಳು ತಲುಪಿವೆ. ನ್ಯಾಯಾಲಯದಲ್ಲಿ ದುಷ್ಟನೊಬ್ಬ ನನ್ನ ಮೇಲೆ ಮೊಕದ್ದಮೆ ಹೂಡಿರುವ ಇಂತಹ ಸೂಕ್ಷ್ಮ ಮತ್ತು ಅಗತ್ಯದ ಸಮಯದಲ್ಲಿ ನಿಮ್ಮ ನಿರಂತರ ಆರ್ಥಿಕ ಸಹಾಯವು ಕೃತಜ್ಞತೆಗೆ ಅರ್ಹವಾಗಿದೆ.

ಒಬ್ಬ ಸಹಾಬಿ ಹೇಳುತ್ತಾರೆ: ನಾನು ಅಹ್ಮದಿಯ್ಯತ್ ಸ್ವೀಕರಿಸಿದೆ ಮತ್ತು ಅದನ್ನು ನನ್ನ ಮನೆಯವರಿಂದ ಮುಚ್ಚಿಟ್ಟಿದ್ದೆ. ಸ್ವಲ್ಪ ಸಮಯದ ನಂತರ ರಹಸ್ಯ ಬಯಲಾಯಿತು. ನೀನು ಅಹ್ಮದಿಯಾಗಿದ್ದೀಯಾ ಎಂದು ತಂದೆ ನನ್ನೊಡನೆ ಸ್ಪಷ್ಟವಾಗಿ ಹೇಳಿ ಮನೆಯಿಂದ ಹೊರಹಾಕಿದರು. ಅನಂತರ ನಾನು ಒಂದು ಅಂಗಡಿಯನ್ನು ತೆರೆದೆ. ನಾನು ದರ್ಜಿ ಕೆಲಸ ಮಾಡುತ್ತಿದ್ದೆ. ಹಝ್ರತ್ ಮಸೀಹ್ ಮೌಊದ್(ಅ)ರಿಗಾಗಿ ಒಂದು ಉಡುಪನ್ನು ಹೊಲಿಯಬೇಕೆಂಬ ಆಸೆ ನನ್ನ ಮನಸ್ಸಿನಲ್ಲಿ ಮೂಡಿತು. ಹಾಗಾಗಿ ನಾನು ಒಂದು ಕುರ್ತಾ, ಸಲ್ವಾರ್ ಮತ್ತು ಒಂದು ಕೋಟನ್ನು ಸಿದ್ಧಪಡಿಸಿದೆ. ಯಾರಿಂದಲೋ ಖಾದಿಯಾನಿನ ಟಿಕೆಟ್ ಹಣ ಪಡೆದು ಅಲ್ಲಿಗೆ ತಲುಪಿದೆ. ಅದು ಶುಕ್ರವಾರವಾಗಿತ್ತು. ಜುಮುಅ ಸಮಯದಲ್ಲಿ ಅದನ್ನು ಧರಿಸುವಂತಾಗಲು ಇಂದೇ ಹಝ್ರತ್ ಮಸೀಹ್ ಮೌಊದ್(ಅ)ರಿಗೆ ಈ ಉಡುಗೊರೆಯನ್ನು ನೀಡಬೇಕೆಂಬುದು ನನ್ನ ಆಸೆಯಾಗಿತ್ತು. ನಾನು ಖಾಝಿ ಝಿಯಾವುದ್ದೀನ್ ಸಾಹಿಬ್‌ರನ್ನು ಅಂಗಡಿಯಲ್ಲಿ ಭೇಟಿಯಾದೆ. ಅವರೊಡನೆ ಹೇಳಿದಾಗ ಅವರು ನನ್ನನ್ನು ಹಝ್ರತ್ ಮಸೀಹ್ ಮೌಊದ್(ಅ)ರ ಬಳಿ ಕರೆದೊಯ್ದರು. ಅವರು ಮಂಚದ ಮೇಲೆ ಕುಳಿತು ಏನನ್ನೋ ಬರೆಯುತ್ತಿದ್ದರು. ಹತ್ತಿರದಲ್ಲೇ ಖ್ವಾಜಾ ಕಮಾಲುದ್ದೀನ್ ಸಾಹಿಬ್

ಚಾಪೆಯ ಮೇಲೆ ಕುಳಿತಿದ್ದರು. ನಾವು ಸಹ ಕುಳಿತುಕೊಂಡೆವು. 'ನಾನು ನಿಮ್ಮ ಉದ್ದೇಶವನ್ನು ಮಂಡಿಸಲೇ?' ಎಂದು ಖಾಜಾ ಸಾಹಿಬ್ ನಮ್ಮೊಡನೆ ಕೇಳಿದರು. ಅನಂತರ ಖಾಜಾ ಸಾಹಿಬ್ ಆ ಬಟ್ಟೆಗಳನ್ನು ಹಝ್ರತ್ ಮಸೀಹ್ ಮೌಊದ್[ಅ]ರಿಗೆ ನೀಡಿ, 'ನೀವು ಈ ಬಟ್ಟೆಗಳನ್ನು ಧರಿಸಿ ಜುಮುಅ ನಮಾಝ್ ನಿರ್ವಹಿಸಬೇಕೆಂಬುದು ಈ ಹುಡುಗನ ಆಸೆಯಾಗಿದೆ ಎಂದು ಹೇಳಿದರು. ಹಝ್ರತ್ ಮಸೀಹ್ ಮೌಊದ್[ಅ] ತಕ್ಷಣವೇ ಒಳಗೆ ಹೋಗಿ ಆ ಉಡುಪನ್ನು ಧರಿಸಿದರು. ಕೋಟ್ ಸ್ವಲ್ಪ ಬಿಗಿಯಾಗಿತ್ತು. ನಾನು ಅದನ್ನು ಬಿಚ್ಚಿ ಸ್ವಲ್ಪ ಸರಿಪಡಿಸಲು ಮಾರುಕಟ್ಟೆಗೆ ತಂದೆ. ಹಿಂತಿರುಗಿ ತಂದಾಗ ಹಝ್ರತ್ ಮಸೀಹ್ ಮೌಊದ್[ಅ] ಪುನಃ ಧರಿಸಿದರು, ಆದರೆ ಅದು ಅವರಿಗೆ ಇನ್ನೂ ಬಿಗಿಯಾಗಿಯೇ ಇತ್ತು. ಗುಂಡಿಗಳು ಹಾಕಲು ಸಾಧ್ಯವಾಗುತ್ತಿರಲಿಲ್ಲ. ಆದರೂ ನನ್ನ ಸಂತೋಷ ಮತ್ತು ಒಲವಿಗಾಗಿ ಕಷ್ಟಪಟ್ಟು ಗುಂಡಿಗಳನ್ನು ಹಾಕಿಕೊಂಡರು.

ಅಹ್ಮದಿಯರನ್ನು ಉದ್ದೇಶಿಸಿ ಬರೆದ ಪತ್ರವೊಂದರಲ್ಲಿ ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ಅಸ್ಸಲಾಮು ಅಲೈಕುಮ್ ವರಹ್ಮತುಲ್ಲಾಹಿ ವಬರಕಾತುಹು. ಮೊದಲನೆಯದಾಗಿ, ನನ್ನ ಹೃದಯದಲ್ಲಿ ಅಲ್ಲಾಹನ ಕೃತಜ್ಞತೆಯು ಉಕ್ಕಿಬರುತ್ತಿದೆ, ಅವನು ನನ್ನ ಜಮಾಅತಿಗೆ ನಿಜವಾದ ಭಕ್ತಿ, ಪ್ರೀತಿ ಮತ್ತು ಸಹಾನುಭೂತಿಯನ್ನು ದಯಪಾಲಿಸಿದ್ದಾನೆ. ದೇವನ ಕೃಪೆ ಅವರೊಂದಿಗೆ ಇಲ್ಲದೇ ಇರುತ್ತಿದ್ದರೆ, ಸಹಾಬಿಯರ ಹೆಜ್ಜೆಗುರುತುಗಳಲ್ಲಿ ಈ ಮಟ್ಟದ ವಿಧೇಯತೆಯನ್ನು ತೋರುವ ಮತ್ತು ತಮ್ಮ ಆರ್ಥಿಕ ತೊಂದರೆಗಳು ಹಾಗೂ ಕಡಿಮೆ ಆದಾಯದ ನಡುವೆಯೂ ತಮ್ಮ ಸಾಮರ್ಥ್ಯಕ್ಕಿಂತ ಮೀರಿ ಆರ್ಥಿಕ ಸೇವೆಯಲ್ಲಿ ತೊಡಗುವ ಸೌಭಾಗ್ಯ ಅವರಿಗೆ ಖಂಡಿತ ಸಿಗುತ್ತಿರಲಿಲ್ಲ. ದೇವನು ಅವರೆಲ್ಲರ ಸಂಪತ್ತಿನಲ್ಲಿ ಅನುಗ್ರಹ ಸುರಿಸಲಿ ಮತ್ತು ಧಾರ್ಮಿಕ ಉದ್ದೇಶಗಳನ್ನು ಪೂರೈಸಲು ಅವರು ಮಾಡುತ್ತಿರುವ ಈ ಸಹಾಯ ಮತ್ತು ಬೆಂಬಲವು ಇಹಲೋಕ ಮತ್ತು ಪರಲೋಕದಲ್ಲಿ ಅವರ ಒಳಿತಿಗೆ ಕಾರಣವಾಗಲಿ ಎಂದು ನಾನು  ದುಆ ಮಾಡುತ್ತೇನೆ. ಆಮೀನ್ ಸುಮ್ಮ ಆಮೀನ್.

ಮತ್ತೊಂದು ಸಂದರ್ಭದಲ್ಲಿ ಹಝ್ರತ್ ಮಸೀಹ್ ಮೌಊದ್[ಅ] ಹೀಗೆ ಹೇಳಿದರು: ಅಲ್ಲಾಹನು ಯಾರನ್ನು ಅನುಗ್ರಹಿಸಿದ್ದಾನೋ, ಅದರ ಕೃತಜ್ಞತೆಯೇನೆಂದರೆ, ಅವನ ಸೃಷ್ಟಿಯೊಂದಿಗೆ ದಯೆ ಮತ್ತು ಒಳಿತಿನಿಂದ ವರ್ತಿಸುವುದು ಮತ್ತು ಈ ದೈವಿಕ ಅನುಗ್ರಹದ ಕುರಿತು ಅಹಂಕಾರ ಪಡದಿರುವುದು ಹಾಗೂ ಕಾಡುಜನರಂತೆ ಬಡವರನ್ನು ತುಳಿಯದಿರುವುದು.

ಅಲ್ಲಾಹನು ಜನರ ವಿಷಯಗಳ ಬಗ್ಗೆಯೂ ಹಝ್ರತ್ ಮಸೀಹ್ ಮೌಊದ್[ಅ]ರಿಗೆ ಮೊದಲೇ ತಿಳಿಸುತ್ತಿದ್ದನು. ಕೆಲವೊಮ್ಮೆ ದೇವನ ಯುಕ್ತಿಯ ಮೇರೆಗೆ ಅವು ನೆರವೇರಲು ಸಮಯ ಹಿಡಿಯುತ್ತಿತ್ತು. ಅಂತಹ ಸಂದರ್ಭಗಳಲ್ಲಿ ಅವರು ಪ್ರಾರ್ಥನೆಗಳಲ್ಲಿ ಮಗ್ನರಾಗುತ್ತಿದ್ದರು. ಆ ಸಂಗತಿ ನೆರವೇರುವಾಗ ಹಝ್ರತ್ ಮಸೀಹ್ ಮೌಊದ್[ಅ] ಅತ್ಯಂತ ಕೃತಜ್ಞತೆಯಿಂದ ಅಲ್ಲಾಹನ ಸನ್ನಿಧಿಯಲ್ಲಿ ಸಾಷ್ಟಾಂಗವೆರಗುತ್ತಿದ್ದರು.

ಒಂದು ಘಟನೆಯನ್ನು ಪ್ರಸ್ತಾಪಿಸುತ್ತಾ ಹಝ್ರತ್ ಮಸೀಹ್ ಮೌಊದ್[ಅ] ಹೀಗೆ ಹೇಳುತ್ತಾರೆ: ಒಮ್ಮೆ ಶರಮ್‌ಪತ್‌ನ ಸಹೋದರನಾದ ಬಿಸಂಬರ್ ದಾಸ್ ಎಂಬ ಹಿಂದೂವಿನ ಬಗ್ಗೆ, 'ಅವನು ಕ್ರಿಮಿನಲ್ ಮೊಕದ್ದಮೆಯಿಂದ ಖುಲಾಸೆಗೊಳ್ಳದೇ ಅವನ ಅರ್ಧ ಶಿಕ್ಷೆ ಬಾಕಿ ಉಳಿಯುವುದು' ಎಂದು ನಾನು ಭವಿಷ್ಯ ನುಡಿದಿದ್ದೆ; ಆಕಸ್ಮಿಕವಾಗಿ ತೀರ್ಪು ಪ್ರಕಟವಾದಾಗ, ಅವನ ವಾರಸುದಾರರು ನಿರೀಕ್ಷೆಗೆ ವಿರುದ್ಧವಾಗಿ ಬಿಸಂಬರ್ ದಾಸ್ ಬಿಡುಗಡೆಯಾಗಿದ್ದಾನೆಂದು ಸುದ್ದಿ ಹಬ್ಬಿಸಿದರು. ನಾನು ಮಸೀದಿಗೆ ನಮಾಝ್ ನಿರ್ವಹಿಸಲು ಹೋದಾಗ, ಬಿಸಂಬರ್ ದಾಸ್ ಬಿಡುಗಡೆಯಾಗಿದ್ದಾನೆ ಮತ್ತು ಮಾರುಕಟ್ಟೆಯಲ್ಲಿ ಅವನಿಗೆ ಅಭಿನಂದನೆಗಳು ಸಲ್ಲುತ್ತಿವೆ ಎಂದು ಒಬ್ಬ ವ್ಯಕ್ತಿ ನನಗೆ ತಿಳಿಸಿದನು. ಮಿರ್ಝಾ ಸಾಹಿಬ್‌ರ ಭವಿಷ್ಯವಾಣಿ ಸುಳ್ಳಾಯಿತು ಎಂದು ಹಿಂದೂಗಳು ಈಗ ಆಕ್ರಮಣ ಮಾಡುತ್ತಾರೆಂಬ ಬಗ್ಗೆ ನನಗೆ ತೀವ್ರ ಆಘಾತವಾಯಿತು. ಈ ದುಃಖದಿಂದಾಗಿ ನಮಾಝಿನ ಪ್ರತಿಯೊಂದು ರಕಅತ್ ನನಗೆ ಒಂದು ವರ್ಷದಂತೆ ಭಾಸವಾಯಿತು ಮತ್ತು ನಮಾಝ್‌ನಲ್ಲಿ ಯಾವುದಾದರೊಂದು ರಕಅತಿನ ನಂತರ ನಾನು ಸಜದಗೆ ಹೋಗುವಾಗ ನನ್ನ ವ್ಯಾಕುಲತೆ ಮಿತಿಮೀರುತಿತ್ತು. ಆಗ ದಿವ್ಯವಾಣಿಯಾಯಿತು: "ಲಾ ತಖಫ್ ಇನ್ನಕ ಅಂತಲ್ ಅಅ್‌ಲಾ" (ಭಯಪಡಬೇಡ, ನೀನೇ ಮೇಲುಗೈ ಸಾಧಿಸುವೆ). ಈ ಭವಿಷ್ಯವಾಣಿ ಹೇಗೆ ನೆರವೇರುವುದು ಎಂದು ನಾನು ಕಾಯುತ್ತಿದ್ದೆ, ಆದರೆ ಯಾವುದೇ ಚಿಹ್ನೆ ಕಾಣಿಸಲಿಲ್ಲ. ನಾನು ಪದೇ ಪದೇ ಶರಮ್‌ಪತ್‌ನನ್ನು ಕೇಳುತ್ತಲೇ ಇದ್ದೆ, ಆದರೆ ಅವನು ಬಿಡುಗಡೆಯಾಗಿದ್ದಾನೆ ಎಂದೇ ಹೇಳಿದನು. ಹೀಗೆಯೇ ಸುಮಾರು ಆರು ತಿಂಗಳು ಕಳೆಯಿತು. ದುಷ್ಟ ಜನರು ಅಪಹಾಸ್ಯ ಮತ್ತು ಗೇಲಿ ಮಾಡುತ್ತಿದ್ದರು, ಆದರೆ ಶರಮ್‌ಪತ್ ಎಂದಿಗೂ ಅಪಹಾಸ್ಯ ಮಾಡಲಿಲ್ಲ. ಒಂದು ದಿನ ಮುಂಜಾನೆ ಬಟಾಲಾದಿಂದ ಒಬ್ಬ ತಹಸೀಲ್‌ದಾರ ಖಾದಿಯಾನಿಗೆ ಬಂದರು. ಅವರು ಇನ್ನೂ ಕುದುರೆಯಿಂದ ಇಳಿಯುವುದಕ್ಕೆ ಮುಂಚಿತವಾಗಿ ಹಿಂದೂಗಳು ಅವರನ್ನು ನಮಸ್ಕರಿಸಲು ಬಂದರು. ಅವರು ಬಿಸಂಬರ್ ದಾಸ್‌ನನ್ನು ನೋಡಿ ಹೀಗೆ ಹೇಳಿದರು: ನೀನು ಜೈಲಿನಿಂದ ಬಿಡುಗಡೆಯಾಗಿರುವುದಕ್ಕೆ ನಮಗೆ ಸಂತೋಷವಿದೆ, ಆದರೆ ನೀನು ಖುಲಾಸೆಗೊಂಡಿಲ್ಲ (ವಿಮುಕ್ತನಾಗಿಲ್ಲ). ಈ ಮಾತನ್ನು ಕೇಳಿದ ಕೂಡಲೇ ನಾನು ಕೃತಜ್ಞತೆಯ ಸಜ್‌ದ ಮಾಡಿದೆ ಮತ್ತು ಶರಮ್‌ಪತ್‌ನೊಡನೆ 'ನೀನೇಕೆ ಇಷ್ಟು ದಿನ ಸುಳ್ಳು ಹೇಳಿ ನನಗೆ ನೋವು ಕೊಟ್ಟೆ' ಎಂದು ಕೇಳಿದೆ. ಅದಕ್ಕವನು ಹೀಗೆ ಹೇಳಿದನು: 'ಅನಿವಾರ್ಯತೆಯಿಂದಾಗಿ ನಾನು ಸುಳ್ಳು ಹೇಳಬೇಕಾಯಿತು. ಇಲ್ಲದಿದ್ದರೆ, ಮದುವೆಯ ಸಂಬಂಧ ಬೆಳೆಸುವಾಗ ನಮ್ಮ ಸಮಾಜದಲ್ಲಿ ಇಂತಹ ವಿಷಯಗಳ ಬಗ್ಗೆ ಬಹಳಷ್ಟು ಟೀಕೆಗಳಾಗುತ್ತವೆ ಮತ್ತು ದುರ್ನಡತೆ ಸಾಬೀತಾದರೆ ಸಂಬಂಧ ಸಿಗುವುದು ಕಷ್ಟವಾಗುತ್ತದೆ.'

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ನನ್ನ ದೃಷ್ಟಾಂತಗಳು ಪ್ರಕಟವಾಗದ ಯಾವ ಸಮುದಾಯ ಕೂಡ ಇಲ್ಲ, ನನ್ನ ನಿದರ್ಶನಗಳಿಗೆ ಸಾಕ್ಷಿಯಾಗದ ಯಾವ ಪಂಗಡವೂ ಇಲ್ಲ. ಈ ನಿದರ್ಶನಗಳ ಸಾಕ್ಷಿಗಳು ಹತ್ತು ಕೋಟಿ ಎಂದು ಹೇಳಿದರು ಕೂಡ ಅದರಲ್ಲಿ ಅತಿಶಯೋಕ್ತಿಯಿಲ್ಲ. ಆದರೆ ವಿರೋಧಿಗಳ ಸ್ಥಿತಿಯನ್ನು ಕಂಡು ಅಳು ಬರುತ್ತದೆ, ಏಕೆಂದರೆ ಅವರು ಯಾವುದೇ ಪ್ರಯೋಜನವನ್ನು ಪಡೆದುಕೊಳ್ಳಲಿಲ್ಲ. ಒಂದು ವೇಳೆ ಇವರಿಗೆ ತೋರಿಸಲಾದ ಈ ದೃಷ್ಟಾಂತಗಳನ್ನು ಹಝ್ರತ್ ಈಸಾ ಬಿನ್ ಮರ್ಯಮ್(ಅ)ರ ಕಾಲದಲ್ಲಿ ಯಹೂದಿಯರಿಗೆ ತೋರಿಸಿರುತ್ತಿದ್ದರೆ "ಝುರಿಬತ್ ಅಲೈಹಿಮುಝ್ಝಿಲ್ಲತು ವಲ್‌ಮಸ್ಕನತು" ಎಂದು ಹೇಳಲಾದಂತೆ ಅವರು ಅಪಮಾನ ಮತ್ತು ಬಡತನಕ್ಕೆ ಅರ್ಹರಾಗುತ್ತಿರಲಿಲ್ಲ. ಲೂತ್(ಅ)ರ ಜನಾಂಗವು ಈ ನಿದರ್ಶನಗಳನ್ನು ನೋಡಿದ್ದರೆ, ಭೀಕರ ಭೂಕಂಪದಿಂದಾಗಿ ನೆಲದಡಿ ಹೂತುಹೋಗುತ್ತಿರಲಿಲ್ಲ. ಆದರೆ ಕಲ್ಲುಗಳಿಗಿಂತಲೂ ಕಠಿಣವೆಂದು ಸಾಬೀತಾದ ಆ ಹೃದಯಗಳ ಬಗ್ಗೆ ದುಃಖವಾಗುತ್ತದೆ; ಎಲ್ಲ ರೀತಿಯಲ್ಲೂ ಅವರ ಹೃದಯದ ಕತ್ತಲೆ ಹೆಚ್ಚಾಯಿತು.

ಅಲ್ಲಾಹನು ನಮಗೆ ಕೃತಜ್ಞತೆಯ ನೈಜ ಅರಿವನ್ನು ಕರುಣಿಸುವುದರೊಂದಿಗೆ, ಹಝ್ರತ್ ಪೈಗಂಬರ್(ಸ)ರ ಸತ್ಯಸಂಧ ದಾಸರಾದ ಹಝ್ರತ್ ಮಸೀಹ್ ಮೌಊದ್(ಅ)ರನ್ನು ಬೈಅತ್ ಮಾಡುವ ಮೂಲಕ ನಮಗೆ ನೈಜ ಬೆಳಕು, ದೃಷ್ಟಿ ಮತ್ತು ಜ್ಞಾನವನ್ನು ಸಹ ದಯಪಾಲಿಸಲಿ.

————————————*****————————————

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَا هَادِیَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَآءِ ذِی الْقُرْبٰی
وَيَنْهٰی عَنِ الْفَحْشَآءِ وَالْمُنْكَرِ وَالْبَغْیِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis***(atba)

At, ***'Masjid Mubarak',*** *Islamabad, Tilford,* U.K. On 28-08-2026

**Summarized by** *Majlis Ansarullah Bharat*

***Kannada Translation:*** Moulavi Inamullah for Kannada Desk, Qadian

***Reviewed by:*** M.P Ibrahim | ***Layout:*** Basheer K.P. Manjeshwar

***Published By:*** Kannada Isha'at Team for Nazarath Nashr-O-Isha'ath, Qadian

***Email:*** *khutuba.kannada@gmail.com*

**You can find all the Sermons archived at**: www.alislam.org/friday-sermon